# ಸಂಕ್ಷಿಪ್ತ ಹಿಂದೂ ವಿಶ್ವಕೋಶ

## – ಒಂದು ಪರಿಚಯ

**ಶಶಿಕಲಾ ಶ್ರೀಧರ್**

**ವೇ**ದಗಳನ್ನು ಅವಲಂಬಿಸಿರುವ ಹಿಂದೂ ಧರ್ಮವನ್ನು "ಸನಾತನ ಧರ್ಮ" ಎಂದು ಕರೆಯುತ್ತಾರೆ. ಇದು ಅತ್ಯಂತ ಪ್ರಾಚೀನವಾದ ಮತ್ತು ಶಾಶ್ವತ ಮೌಲ್ಯಗಳನ್ನು ಒಳಗೊಂಡಿರುವ ಧರ್ಮ. ಯಾವ ಧರ್ಮದ ಹಲವು ರೀತಿಯ ಉಪಾಸನಾ ಮಾರ್ಗಗಳು ಹಿಂದೆ, ಇಂದು ಹಾಗೂ ಮುಂದೆಯೂ ಅಸಂಖ್ಯಾತ ಜನರಿಗೆ ಭಗವದ್ಭಾವವನ್ನು ಪ್ರಸರಿಸುತ್ತ ಬಂದಿರುವುದೋ ಅದೇ "ಸನಾತನ ಧರ್ಮ". ಇದು ಒಬ್ಬ ವ್ಯಕ್ತಿಯಿಂದ ಒಂದು ನಿರ್ದಿಷ್ಟ ಕಾಲದಲ್ಲಿ ಸ್ಥಾಪಿತವಾದುದಲ್ಲ. ಇದು ಹಲವಾರು ಋಷಿಗಳ ಅತೀಂದ್ರಿಯ ದರ್ಶನಗಳ ಮತ್ತು ಆಧ್ಯಾತ್ಮಿಕ ಅನುಭವಗಳ ಮೇಲೆ ಸುಭದ್ರವಾಗಿ ನೆಲೆನಿಂತಿರುವ ಧರ್ಮ. ದೇವರು ಒಬ್ಬನೇ, ಅವನ ನಿಜಸ್ವರೂಪ ಸತ್–ಚಿತ್–ಆನಂದ ಎಂಬುದಾಗಿ ಎಲ್ಲಾ ಜಾತಿ ಪಂಗಡದವರೂ ಒಪ್ಪುತ್ತಾರೆ. ಸಾಕಾರ ವಿಗ್ರಹಾರಾಧಕನಿಂದ ಹಿಡಿದು ಪರಬ್ರಹ್ಮನ ನಿರಾಕಾರ ತತ್ತ್ವವನ್ನು ನಂಬಿ ಸಾಗುವ ಸಾಧಕನವರೆಗೂ ಈ ಧರ್ಮದ ವ್ಯಾಪ್ತಿ ಇದೆ. ಎಲ್ಲ ಮತ ಧರ್ಮಗಳೂ ವೃತ್ತದ ಪರಿಧಿಯ ಮೇಲಿನ ಬಿಂದುಗಳಂತೆ. ವೃತ್ತದ ಕೇಂದ್ರವೇ ಪರಮಾತ್ಮ ಸಾಕ್ಷಾತ್ಕಾರ. ಆದ್ದರಿಂದ ಎಲ್ಲಾ ಮತಧರ್ಮಗಳು ಒಬ್ಬನೇ ಪರಮಾತ್ಮ ನೆಡೆಗೆ ಕರೆದೊಯ್ಯುವ ವಿವಿಧ ಉಪಾಸನಾ ಮಾರ್ಗಗಳು. ಈ ಸರ್ವ ಧರ್ಮ ಸಮನ್ವಯವನ್ನು ಆಧುನಿಕ ಯುಗದಲ್ಲಿ ಅವತರಿಸಿದ ಶ್ರೀರಾಮಕೃಷ್ಣ ಪರಮಹಂಸರು ತಮ್ಮ ಜೀವನದಲ್ಲಿ ಪ್ರತ್ಯಕ್ಷವಾಗಿ ಆಚರಿಸಿ ತೋರಿಸಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ವಿವಿಧತೆಯಲ್ಲಿ ಏಕತೆಯು ಪ್ರಕೃತಿಯ ನಿಯಮ ಎಂಬುದನ್ನು ಪ್ರತಿಯೊಬ್ಬ ಹಿಂದುವೂ ಬಲ್ಲ. ಆದ್ದರಿಂದಲೇ ಇಲ್ಲಿ ಪರಮತ ಸಹಿಷ್ಣುತೆ ಎಂಬುದು ಸಹಜವಾಗಿ ಬಂದಿರುವ ಶ್ಲಾಘನೀಯ ಗುಣ.

ಇಂತಹ ಅದ್ಭುತವೂ ಅಮರವೂ ಆದ 'ಹಿಂದೂಧರ್ಮ' ವೆಂಬ ಮಹಾವೃಕ್ಷದ ತಾಯಿಬೇರು ವೇದೋಪನಿಷತ್ತುಗಳು. ಧರ್ಮತತ್ತ್ವವೆಂಬ ಕಾಂಡದಿಂದಲೂ, ಪುರಾಣಗಳು, ಸಂಪ್ರದಾಯ, ಅಧ್ಯಾತ್ಮ, ಉತ್ಸವ, ಹಬ್ಬಹರಿದಿನಗಳು ಹಾಗೂ ಯಾತ್ರಾಕ್ಷೇತ್ರಗಳೆಂಬ ಶಾಖೋಪಶಾಖೆಗಳಿಂದಲೂ, ಜ್ಯೋತಿಷ, ಸಂತರ ಜೀವನ, ಪ್ರತಿಮಾಶಾಸ್ತ್ರ, ಸಂಸ್ಕೃತ ಭಾಷೆ, ದೇವಾಲಯಗಳು ಹಾಗೂ ಧಾರ್ಮಿಕಸಂಸ್ಥೆಗಳೆಂಬ ಪತ್ರಪುಷ್ಪಗಳಿಂದಲೂ ಕೂಡಿ ಸತ್–ಚಿತ್–ಆನಂದವೆಂಬ ಫಲಗಳನ್ನು ಕರುಣಿಸುವ ಈ ಮಹಾವೃಕ್ಷವು, ಅದರ ನೆರಳಿನಲ್ಲಿ ನಿಂತು ಚೇತರಿಸಿಕೊಳ್ಳುವ ಎಲ್ಲ ಜೀವಿಗಳಿಗೂ ತಂಪನ್ನು ನೀಡಲೆಂಬುದೇ ನಮ್ಮೆಲ್ಲರ ಆಶಯ.

ಇಂತಹ ಬೃಹತ್ ಹಿಂದೂ ಮಹಾವೃಕ್ಷದ ಅಧ್ಯಯನ ಪ್ರಪಂಚದ ಎಲ್ಲ ವಿದ್ವಾಂಸರನ್ನೂ ತನ್ನೆಡೆಗೆ ಸೆಳೆಯುತ್ತಿದೆ. ಆದರೆ, ಹಿಂದೂಧರ್ಮದ ಸಮಗ್ರ ಮಾಹಿತಿಯನ್ನೊಳಗೊಂಡ ಪುಸ್ತಕಗಳು ಅತಿ ವಿರಳ. ಧಾರ್ಮಿಕ ಶ್ರದ್ಧಾಳುಗಳ ಈ ಕೊರತೆಯನ್ನು ನೀಗಿಸಲು ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಹರ್ಷಾನಂದಜೀಯವರು ಹಲವಾರು ವರ್ಷಗಳ ಹಿಂದೆ ಇದರ ಬಗ್ಗೆ ಅಧ್ಯಯನವನ್ನು ಪ್ರಾರಂಭಿಸಿದರು. ಆಗ ಅವರೆದುರು ಎರಡು ಆಯ್ಕೆಗಳಿದ್ದವು: ೧) ಹಿಂದೂ ಧರ್ಮದ ಬಗ್ಗೆ ವಿಸ್ತಾರವಾದ ಅಧ್ಯಯನವನ್ನೊಳಗೊಂಡ ಒಂದು ಪುಸ್ತಕವನ್ನು ಬರೆಯುವುದು. ೨) ಇಂಗ್ಲಿಷಿನ ಪದಾನುಕ್ರಮದ ಆಧಾರದ ಮೇಲೆ ರಚಿಸಬಹುದಾದ ಒಂದು **ಹಿಂದೂವಿಶ್ವಕೋಶದ ರಚನೆ**.

### ವಿಶ್ವಕೋಶದ ಒಂದು ಒಳನೋಟ

೧) ಇದರಲ್ಲಿ ಧರ್ಮ, ತತ್ತ್ವ, ಪುರಾಣಸಾಹಿತ್ಯ, ಶಾಸ್ತ್ರವಿಧಿ, ಧರ್ಮಗ್ರಂಥ, ಹಬ್ಬ ಹರಿದಿನಗಳು, ತೀರ್ಥಕ್ಷೇತ್ರಗಳ ದೀರ್ಘ ವಿವರಣೆ ಕೊಡಲಾಗಿದೆ. ೨) ಜ್ಯೋತಿಷ, ಸಂತರ ಜೀವನಚರಿತ್ರೆ, ಪ್ರಾಚೀನ ಪ್ರತಿಮಾಶಾಸ್ತ್ರ, ಸಂಸ್ಕೃತ ಭಾಷೆ ಮತ್ತು ಸಾಹಿತ್ಯ, ದೇವಾಲಯಗಳು ಹಾಗೂ ಧಾರ್ಮಿಕ ಸಂಸ್ಥೆಗಳ ವಿವರ ಲಭ್ಯವಿವೆ. ೩) ನಾಲ್ಕು ವೇದಗಳು. ಅವುಗಳ ಅಧ್ಯಯನಕ್ಕೆ ಸಹಾಯಕ ಗ್ರಂಥಗಳು ಹಾಗೂ ಸಂಬಂಧಪಟ್ಟ ಸಾಹಿತ್ಯ, ಅನೇಕ ಮುಖ್ಯವಾದ ವೇದಸೂಕ್ತಗಳು, ಯಾಗಯಜ್ಞಗಳ ಆಹುತಿಗಳು ಮುಂತಾದ ಅನೇಕ ಅಪರೂಪದ ವಿಚಾರಗಳನ್ನು ಒಳಗೊಂಡಿದೆ. ೪) ಪ್ರಮುಖ ಉಪನಿಷತ್ತುಗಳು ಹಾಗೂ ಮಹಾಪುರಾಣಗಳು, ಕಿರು ಉಪನಿಷತ್ತುಗಳು ಹಾಗೂ ಉಪಪುರಾಣಗಳನ್ನು ವಿವರಿಸಲಾಗಿದೆ. ೫) ರಾಮಾಯಣದ ಬಗ್ಗೆ ದೀರ್ಘ ವ್ಯಾಖ್ಯಾನ, ಮಹಾಭಾರತದ ಅತಿ ಮುಖ್ಯ ಪ್ರಸಂಗಗಳಾದ ಧರ್ಮಾಖ್ಯಾನ, ಯಕ್ಷಪ್ರಶ್ನೆ, ಭಗವದ್ಗೀತೆ, ವಿಷ್ಣುಸಹಸ್ರನಾಮ ಮುಂತಾದವುಗಳ ಸ್ಪಷ್ಟ ವಿವರಣೆಗಳನ್ನು ನೀಡಲಾಗಿದೆ. ೬) ಆಗಮ ಹಾಗೂ ತಂತ್ರಶಾಸ್ತ್ರಗಳ ಬಹಳಷ್ಟು ಗ್ರಂಥಗಳು ಹಸ್ತಲಿಪಿಯ ರೂಪದಲ್ಲೇ ಇರುವುದರಿಂದ ತಂತ್ರಶಾಸ್ತ್ರದ ಅತ್ಯಂತ ಪ್ರಚಲಿತ ವಿಚಾರಗಳನ್ನು ಮಾತ್ರ ನೀಡಲಾಗಿದೆ. ೭) ಬೌದ್ಧಧರ್ಮ, ಜೈನಧರ್ಮ, ಸಿಖ್ ಧರ್ಮಗಳ ಸಂಕ್ಷಿಪ್ತ ವಿವರಣೆ ಹಾಗೂ ಆಯಾ ಧರ್ಮಸಂಸ್ಥಾಪಕರ ಜೀವನಚರಿತ್ರೆಗಳನ್ನೂ ಹೊಂದಿವೆ. ೮) ೨೦೦ ರೇಖಾಚಿತ್ರ ಹಾಗೂ ಹಾಫ್–ಟೋನ್ ಚಿತ್ರಗಳು. ಸುಮಾರು ೧೦೦ ರಷ್ಟು ಛಾಯಾಚಿತ್ರಗಳನ್ನೂ ಅಗತ್ಯವಿರುವೆಡೆಯಲ್ಲಿ ಕೊಟ್ಟಿರುವುದು ವಿವರಗಳಿಗೆ ವಿಶೇಷ ರೂಪವನ್ನು ಒದಗಿಸಿದೆ. ೯) **ವಿಶ್ವಕೋಶದ** ವಿವರಗಳು ಇಂಗ್ಲಿಷ್ ವರ್ಣಮಾಲೆಯನುಸಾರ ಅಣಿ ಮಾಡಲಾಗಿವೆ. ಸಂಸ್ಕೃತ ಶೀರ್ಷಿಕೆಗಳು ಅಧಿಕ ಸಂಖ್ಯೆಯಲ್ಲಿರುವುದರಿಂದ ಅವುಗಳ ಉಚ್ಚಾರಣೆಗೆ ಅನುಕೂಲವಾಗುವಂತೆ ನಿರ್ದಿಷ್ಟ ಶಬ್ದ ಸೂಚಕ ಸಂಕೇತಗಳನ್ನು ಸೂಚಿಸಲಾಗಿದೆ. ೧೦) ಸುಪ್ರಸಿದ್ಧರಾದ ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರ ಜೀವನ ವೃತ್ತಾಂತಗಳನ್ನು ಕುರಿತ ಟಿಪ್ಪಣಿಗಳನ್ನು ಪರಿಶಿಷ್ಟ ವಿಭಾಗದಲ್ಲಿ ಕಾಣಬಹುದಾಗಿದೆ.

### ವಿಶ್ವಕೋಶದ ಗ್ರಂಥಕರ್ತರ ಅವಿರತ ಶ್ರಮ

ಸ್ವಾಮಿ ಹರ್ಷಾನಂದಜಿಯವರು ರಾಮಕೃಷ್ಣ ಮಠದ ಹಿರಿಯ ಸಂನ್ಯಾಸಿಗಳು. ಪ್ರಸ್ತುತ ಬೆಂಗಳೂರಿನ ಬಸವನಗುಡಿಯ ರಾಮಕೃಷ್ಣ ಮಠದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ೧೯೩೧ ನೇ ಇಸವಿಯಲ್ಲಿ, ತಮ್ಮ ೧೭ ನೇ ವಯಸ್ಸಿನಲ್ಲಿ ಬೆಂಗಳೂರು ರಾಮಕೃಷ್ಣ ಆಶ್ರಮದ ಸಂಪರ್ಕಕ್ಕೆ ಬಂದರು. ಸ್ವಾಮಿ ವಿವೇಕಾನಂದರ ವಿಚಾರಗಳಿಂದ ಅತ್ಯಂತ ಪ್ರಭಾವಿತರಾಗಿ ೧೯೫೪ ರಲ್ಲಿ ರಾಮಕೃಷ್ಣ ಮಠಕ್ಕೆ ಸೇರಿ, ೧೯೬೨ ರಲ್ಲಿ ಸಂನ್ಯಾಸದೀಕ್ಷೆ ಪಡೆದರು. ಮುಂದೆ ರಾಮಕೃಷ್ಣ ಮಠದ ಮಂಗಳೂರು, ಮೈಸೂರು, ಅಲಹಾಬಾದ್ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿ, ಬೇಲೂರು ಮಠದ ತರಬೇತಿ ಕೇಂದ್ರದಲ್ಲಿ ಪ್ರಾಚಾರ್ಯರಾಗಿ ಕಿರಿಯರಿಗೆ ಮಾರ್ಗದರ್ಶನ ಮಾಡಿದ್ದಾರೆ. ಆಂಧ್ರಪ್ರದೇಶದಲ್ಲಿ ಚಂಡಮಾರುತದಿಂದ ತೊಂದರೆ ಉಂಟಾದಾಗ, ಅಲ್ಲಿನ ಪರಿಹಾರ ಶಿಬಿರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ೧೯೮೯ ರಲ್ಲಿ ಬೆಂಗಳೂರಿನ ಬಸವನಗುಡಿಯ ರಾಮಕೃಷ್ಣ ಮಠಕ್ಕೆ ಅಧ್ಯಕ್ಷರಾಗಿ ನೇಮಿಸಲ್ಪಟ್ಟರು.

ಕನ್ನಡ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಪಡೆದಿರುವ ಸ್ವಾಮಿ ಹರ್ಷಾನಂದಜಿ ಅವರು ಅನೇಕ ಪುಸ್ತಕಗಳನ್ನು

ಬರೆದಿದ್ದಾರೆ. **ಹಿಂದೂ ಧರ್ಮದ ವಿಶ್ವಕೋಶದ** ರಚನೆಯ ಸಂದರ್ಭದಲ್ಲಿ, ಇವರ ಅನೇಕ ದೀರ್ಘ ಪ್ರಬಂಧಗಳು ಕಿರುಹೊತ್ತಗೆಗಳಾಗಿ ಪ್ರಕಟಗೊಂಡವು. ಇವರ ಅನೇಕ ಪುಸ್ತಕಗಳು ಇತರ ವಿದೇಶಿ ಭಾಷೆಗಳಿಗೂ ಭಾಷಾಂತರ ಹೊಂದಿವೆ. ಕೆಲವು ಪುಸ್ತಕಗಳನ್ನು ಮೈಸೂರು ವಿಶ್ವವಿದ್ಯಾಲಯವೂ ಪ್ರಕಟಿಸಿದೆ. ಆಶ್ರಮದ ಸಭಾಂಗಣದಲ್ಲಿ ಇವರು ನೀಡುವ ಕನ್ನಡ ಹಾಗೂ ಇಂಗ್ಲಿಷಿನ ಉಪನ್ಯಾಸಗಳು ಅತ್ಯಂತ ಉತ್ತಮ ಗುಣಮಟ್ಟ ಹೊಂದಿದ್ದು, ವಿಷಯದ ಅತಿ ಸೂಕ್ತ ಹಾಗೂ ಪ್ರಧಾನ ಅಂಶಗಳ ಪ್ರತಿಪಾದನೆಯನ್ನು ಹೊಂದಿರುತ್ತವೆ. ಸ್ವಾಮಿ ಹರ್ಷಾನಂದಜಿ ಅವರು ಕರ್ನಾಟಕ ಹಾಗೂ ಹಿಂದೂಸ್ತಾನಿ– ಈ ಎರಡೂ ಶೈಲಿಗಳಲ್ಲಿ ಭಜನೆಗಳನ್ನು ಸುಶ್ರಾವ್ಯವಾಗಿ ಹಾಡಲು ಸಮರ್ಥರು. ಇವರು ಮಧುರ ಧ್ವನಿಯಲ್ಲಿ ಹಾಡಿದ ಭಜನೆಗಳ ಅನೇಕ ಕ್ಯಾಸೆಟ್ ಹಾಗೂ ಸಿ.ಡಿ.ಗಳು ಹೊರಬಂದಿವೆ.

### ಹಿಂದೂವಿಶ್ವಕೋಶದ ರಚನೆಗೆ ಪ್ರೇರಣೆ ಮತ್ತು ಇದರ ಪ್ರಾಮುಖ್ಯ

ಸ್ವಾಮೀಜಿಯವರ ಮಾತಿನಲ್ಲೇ ಹೇಳುವುದಾದರೆ." ನಾನು ರಾಮಕೃಷ್ಣ ಆಶ್ರಮದ ಸಂಪರ್ಕಕ್ಕೆ ಬಂದ ಪ್ರಾರಂಭದ ದಿನಗಳಲ್ಲಿ ಹಿಂದೂಧರ್ಮದ ಬಗ್ಗೆ ನನ್ನಲ್ಲಿ ಸಾಕಷ್ಟು ಗೊಂದಲಗಳಿದ್ದವು. ಇವುಗಳನ್ನು ನಿವಾರಿಸುವ ಯಾವ ಗ್ರಂಥಗಳೂ ನನಗೆ ದೊರಕಲಿಲ್ಲ. ಆಶ್ರಮದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ತ್ಯಾಗೀಶಾನಂದಜಿ ಮುಂತಾದವರು ನನ್ನ ಗೊಂದಲಗಳನ್ನು ಪರಿಹರಿಸುತ್ತಿದ್ದರು. ಮೈಸೂರಿನ RIMSE (ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ) ಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಈ ಕೋಶವನ್ನು ರಚಿಸಲು ಯೋಚಿಸುತ್ತಿದ್ದೆ. ಅಭ್ಯಾಸ ಹಾಗೂ ಸತ್ಸಂಗದಿಂದ ನನ್ನ ಅರಿವಿಗೆ ಬಂದ ನಮ್ಮ ಹಿರಿಯರು ಕಂಡುಕೊಂಡ ಜ್ಞಾನವನ್ನು ಒಂದೆಡೆ ವ್ಯವಸ್ಥಿತವಾಗಿ ದಾಖಲಿಸುವ ಪ್ರಯತ್ನದ ಭಾಗವಾಗಿ ಈ ವಿಶ್ವಕೋಶವನ್ನು ರಚಿಸಿದೆ."

"ಇತರ ಧರ್ಮಗಳಿಗೂ ಹಿಂದೂ ಧರ್ಮಕ್ಕೂ ಇರುವ ಪ್ರಮುಖ ವ್ಯತ್ಯಾಸವೆಂದರೆ ನಮ್ಮಲ್ಲಿ ಅನೇಕತೆಯಲ್ಲಿ ಏಕತೆಯನ್ನು ಕಾಣುತ್ತೇವೆ. ಆದರೂ ಧರ್ಮಕ್ಕೆ ಸಂಬಂಧಿಸಿದಂತೆ ಕೆಲವು ನಿರ್ದಿಷ್ಟ ವಿಚಾರದಲ್ಲಿ ಹಿಂದೂಗಳಲ್ಲಿ ಅನೇಕ ಗೊಂದಲಗಳಿವೆ. ಈ **ವಿಶ್ವಕೋಶ** ಅಂತಹ ಗೊಂದಲಗಳನ್ನು ನಿವಾರಿಸಿ ಹಿಂದೂಧರ್ಮದ ಏಕತೆಯನ್ನು ಎತ್ತಿ ಹಿಡಿಯುವ ಸಾಧನವಾಗಲಿದೆ."

"ಆಧುನಿಕ ಅಧ್ಯಾತ್ಮದತ್ತ (Modern Spirituality) ಇಂದಿನ ಯುವ ಜನರ ಒಲವು ಹೆಚ್ಚುತ್ತಿದೆ. ಈ ಆಧುನಿಕ ಅಧ್ಯಾತ್ಮದ ಅಂಶಗಳಲ್ಲಿರುವುದೂ ವೇದೋಕ್ತ ಜೀವನಾದರ್ಶವೇ ಹೊರತು ಬೇರೇನಲ್ಲ. ಲೌಕಿಕಕ್ಕೆ ಸಿಗುತ್ತಿರುವ ಅತಿಯಾದ ಪ್ರಾಮುಖ್ಯದಿಂದ ಉಂಟಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಜನ ಜಾಗೃತರಾಗಿ ಅದರ ಜೊತೆಗೆ ಸಮತೋಲನ ಸಾಧಿಸಲು ಅಧ್ಯಾತ್ಮದ ಮೊರೆಹೋಗುತ್ತಿದ್ದಾರೆ. ಇದು ಉತ್ತಮ ಬೆಳವಣಿಗೆಯ ಲಕ್ಷಣ. ನಮ್ಮ ವಿಶ್ವಕೋಶದಿಂದ ಅತಿ ಹೆಚ್ಚು ಪ್ರಯೋಜನವಾಗುವ ಜನರಲ್ಲಿ ಇಂಥವರ ಸಂಖ್ಯೆಯೂ ಗಣನೀಯ ಪ್ರಮಾಣದಲ್ಲಿರುತ್ತದೆ."

### ಇಂದಿನ ಸಮಾಜ ಈ ವಿಶ್ವಕೋಶವನ್ನು ಹೇಗೆ ಸ್ವೀಕರಿಸಬಹುದು?

"ಮೊದಲ ಮುದ್ರಣದಲ್ಲಿ ೪,೦೦೦ ಸೆಟ್‌ಗಳನ್ನು ಅಚ್ಚುಮಾಡಬೇಕೆಂದು ತೀರ್ಮಾನಿಸಿದ್ದೆವು. ಆದರೆ ಪ್ರಕಟನಾಪೂರ್ವ ಬೇಡಿಕೆಯೇ (ಸುಮಾರು ೨,೮೦೦ ಸೆಟ್‌ಗಳು) ಸಾಕಷ್ಟು ಬಂದಿರುವುದರಿಂದ ಒಟ್ಟು ೮,೦೦೦ ಸೆಟ್‌ಗಳನ್ನು ಮುದ್ರಿಸುತ್ತಿದ್ದೇವೆ. ಧರ್ಮವನ್ನು ನಿರ್ದಿಷ್ಟ ವಯೋಮಾನ ಹಾಗೂ ಆರ್ಥಿಕ ಹಿನ್ನೆಲೆಯ ಜನರು ಮಾತ್ರವೇ ತಿಳಿಯಲು ಇಚ್ಛಿಸುತ್ತಾರೆ ಎಂದೇನಿಲ್ಲ. ಮುಖ್ಯವಾಗಿ ಮಧ್ಯಮ ವರ್ಗದ ಹಿಂದೂಗಳಿಗೆ ಈ ಕೋಶದಲ್ಲಿ ಆಸಕ್ತಿ ಇದೆ. ಬೆಲೆಯೂ ಕಡಿಮೆಯಿರುವುದರಿಂದ ಇದು ಖಂಡಿತವಾಗಿಯೂ ಜನರನ್ನು ತಲುಪುತ್ತದೆ."

### ವಿಶ್ವಕೋಶದ ವಿವರ

೧೯೭೫ ನೇ ಇಸವಿಯಲ್ಲಿ ಪ್ರಾರಂಭವಾಗಿ ಈಗ ಪ್ರಕಟಣೆಗೆ ಸಿದ್ಧವಾಗಿರುವ ಈ ಉತ್ಕೃಷ್ಟ ಗ್ರಂಥ ಸ್ವಾಮಿ ಹರ್ಷಾನಂದಜಿಯವರ ೩೩ ವರ್ಷಗಳ ತಪಸ್ಸಿನ ಫಲವಾಗಿದೆ. ಇಂಗ್ಲಿಷ್ ಭಾಷೆಯಲ್ಲಿರುವ ಈ ವಿಶ್ವಕೋಶ ೩ ಸಂಪುಟಗಳನ್ನು ಹೊಂದಿದ್ದು, ಪ್ರತಿ ಸಂಪುಟವೂ ೭೦೦ ಪುಟಗಳಷ್ಟಿವೆ. (ಗಾತ್ರ : ೨೪ X ೧೮ ಸೆಂ.ಮಿ.) ಇದರಲ್ಲಿ ೨೦೦ ರೇಖಾಚಿತ್ರಗಳನ್ನು ಮತ್ತು ಸುಮಾರು ೧೦೦ ಛಾಯಾಚಿತ್ರಗಳನ್ನು ಬಳಸಲಾಗಿವೆ.

ರಿಯಾಯಿತಿ ದರ : 1500/– ರೂ. ಗಳು
ಪ್ರಕಟಣಾ ಪೂರ್ವ ಬೆಲೆ : 1000/– ರೂ. ಗಳು ಮಾತ್ರ

**ಈ ಸೌಲಭ್ಯವನ್ನು ಸಾರ್ವಜನಿಕರ ಬೇಡಿಕೆಯ ಮೇರೆಗೆ 30. 4. 2008 ವರೆಗೆ ವಿಸ್ತರಿಸಲಾಗಿದೆ. ಈ ಸದವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಬಹುದು.** ಕೊರಿಯರ್ ವೆಚ್ಚ 200/– ರೂ. ಗಳು (ಭಾರತದಲ್ಲಿ) ಅಮೆರಿಕಾ ಮತ್ತು ಯುರೋಪ್ ದೇಶಗಳಿಗೆ 60 ಡಾಲರುಗಳು. (USD 60). ವಿದೇಶಗಳಿಗೆ ಕಳುಹಿಸುವ ವಿವರಗಳನ್ನು ಬೆಂಗಳೂರು ರಾಮಕೃಷ್ಣ ಮಠದಿಂದ ಪಡೆಯಬಹುದು.

**ಈ ಅತ್ಯಮೂಲ್ಯ ವಿಶ್ವಕೋಶವು ಪ್ರತಿಯೊಂದು ಹಿಂದೂ ಹಾಗೂ ಎಲ್ಲ ಮತದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕೇಂದ್ರಗಳಲ್ಲೂ, ಸಾರ್ವಜನಿಕ ಪುಸ್ತಕ ಭಂಡಾರಗಳಲ್ಲೂ, ಶಾಲಾ ಕಾಲೇಜುಗಳಲ್ಲೂ, ವಿಶ್ವವಿದ್ಯಾಲಯಗಳಲ್ಲೂ ಹಾಗೂ ಮನೆಮನೆಯಲ್ಲಿಯೂ ಸಂಗ್ರಹಿಸಲು ಯೋಗ್ಯವಾಗಿದೆ. ವಿಶೇಷ ರಿಯಾಯಿತಿ ಪಡೆಯಲಿಚ್ಛಿಸುವವರು ಈ ಕೆಳಗಿನ ಅಂಶಗಳನ್ನು ಗಮನಿಸಿ:**

**ಅ) 1000/–ರೂ.ಗಳನ್ನು (ತಾ.30.4.08 ರ ವರೆಗೆ ಮಾತ್ರ) ವೈಯುಕ್ತಿಕವಾಗಿ ಅಥವಾ ಬ್ಯಾಂಕ್ ಡಿಡಿ/ಚೆಕ್ ನ ಮೂಲಕ, 'ರಾಮಕೃಷ್ಣ ಮಠ, ಬಸವನಗುಡಿ, ಬೆಂಗಳೂರು' ಇದಕ್ಕೆ ಸಂದಾಯವಾಗುವಂತೆ ಕಳುಹಿಸಿ ರಸೀತಿಯನ್ನು ಪಡೆಯತಕ್ಕದ್ದು. ಪ್ರಕಟಣಾನಂತರ ರಸೀತಿಯನ್ನು ಕೊಟ್ಟು ತಮ್ಮ ಪ್ರತಿಗಳನ್ನು ಪಡೆಯಬಹುದು.**

**ಆ) ಕೊರಿಯರ್ ಮೂಲಕ ಪ್ರತಿಗಳನ್ನು ಪಡೆಯಲು ಇಚ್ಛಿಸುವವರು ಮೇಲ್ಕಂಡ ಹೆಸರಿನಲ್ಲಿ 1200/–ರೂ. ಗಳ ಬ್ಯಾಂಕ್ ಡಿಡಿ/ಚೆಕ್‌ನ್ನು ತಮ್ಮ ಹೆಸರು ಮತ್ತು ಪೂರ್ಣ ವಿಳಾಸವುಳ್ಳ ಪತ್ರದೊಡನೆ ಲಗತ್ತಿಸಿ ಕಳುಹಿಸಬೇಕಾಗಿ ವಿನಂತಿ. (ಬ್ಯಾಂಕ್ ಡಿಡಿ/ ಚೆಕ್‌ನ ಹಿಂಬದಿಯಲ್ಲಿ ತಮ್ಮ ಹೆಸರನ್ನು ಬರೆಯಿರಿ.)**

**ಪ್ರಿಯ ಓದುಗರೇ, ತ್ವರೆಮಾಡಿ,**
**ನಿಮ್ಮ ನಿಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.**

**ಸಂಪರ್ಕಿಸಬೇಕಾದ ವಿಳಾಸ:**

**ರಾಮಕೃಷ್ಣ ಮಠ,**
**ಬುಲ್ ಟೆಂಪಲ್ ರಸ್ತೆ, ಬೆಂಗಳೂರು – 560 019**
**ದೂರವಾಣಿ:** 080–26616060/ 26616161
**ಇ–ಮೇಲ್:** rkmblr_publi@vsnl.net;
ramakrishnamathblr@dataone.in